<u>ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಮೇರೆಗೆ ಪ್ರಮಾಣೀಕರಿಸಲಾಯಿತು . ದಿ: 06-03-2025.</u>

<u>ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ</u>

ದಿಃ06-10-2023 ರಂದು ಘಟನೆಯಾಗಿತ್ತು . ಆ ದಿವಸ ಮುಂಜಾನೆ 7-25 ರಿಂದ 7-30 ಗಂಟೆ ಸಮಯದಲ್ಲಿ ನಾನು ಕೆಲಸಕ್ಕೆ ಹೋಗಲು ಮನೆಯಿಂದ ಹೊರಟ್ಟಿದ್ದೆ . ನಾನು ಸಂಡೂರು ಬಸ್ ನಿಲ್ದಾಣ್ ದಲ್ಲಿ ಇದ್ದಾಗ ಮುಂಜಾನೆ 7-40 ರ ಸುಮಾರಿಗೆ ನನ್ನ ಹೆಂಡತಿಯಾದ ಚಾಸಾ-9 ರವರು ನನಗೆ ಫೋನ್ ಮಾಡಿ ಆರೋಪಿಯು ನನ್ನ ತಂದೆಯ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿದ್ದ ಎಂದು ಮತ್ತು ನನ್ನ ತಂದೆಯನ್ನು ಹಳೇ ಮನೆಯಿಂದ ಹೊಸ ಮನೆಗೆ ನನ್ನ ತಾಯಿ ಶಾಂತಿ ಬಾಯಿ ಮತ್ತು ನನ್ನ ಅಣ್ಣ ಲೋಕೇಶ್ ನಾಯ್ಕು ಸೇರಿ ಹೊಸ ಮನೆಗೆ ಕರೆದುಕೊಂಡು ಬಂದಿದ್ದರು ಎಂದು ಮತ್ತು ಆರೋಪಿಯು ಹಳೇ ಮನೆಯಿಂದ ಹೊಸ ಮನೆಗೆ ಸಹ ಬಂದು ನನ್ನ ತಂದೆಯ ಮೇಲೆ ಹಲ್ಲೆ ಮಾಡಲು ಬಂದಿದ್ದಾನೆ ಎಂದು ಹೇಳಿದ್ದಳು ಮತ್ತು ನನಗೆ ಸ್ಥಳಕ್ಕೆ ತಕ್ಷಣ ಬರುವಂತೆ ತಿಳಿಸಿದ್ದಳು. ನಾನು ಊರಿಗೆ ವಾಪಾಸ್ಸು ಬರುವಷ್ಟರಲ್ಲಿ ನನ್ನ ಅಣ್ಣ ಲೋಕೇಶ್ ನಾಯ್ಕು ರವರು ನನ್ನ ತಂದೆಯನ್ನು ಕಾರಿನಲ್ಲಿ ಕೂರಿಸಿಕೊಂಡು ಸಂಡೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಕರೆದುಕೊಂಡು ಬರುತ್ತಿದ್ದನು. ನಾನು 112 ನಂಬರ್ ಗೆ ಫೋನ್ ಮಾಡಿ ವಿಷಯ ತಿಳಿಸಿ ಆರೋಪಿಯನ್ನು ಬಂಧಿಸಬೇಕೆಂದು ಮನವಿ ಮಾಡಿಕೊಂಡಿದ್ದೆ . ನಾನು ನನ್ನ ತಂದೆಯನ್ನು ಊರಿನ ಮಧ್ಯೆ ವಾಹನದಲ್ಲಿ ನೋಡಿದ್ದೆ . ನನ್ನ ತಂದೆಗೆ ಪ್ರಜ್ಞೆ ತಪ್ಪಿತ್ತು ಮತ್ತು ಅವರಿಗೆ ತಲೆಯ ಮೇಲೆ ಮಚ್ಚಿನಿಂದ ಹಲ್ಲೆ ಮಾಡಿದ ರಕ್ತಗಾಯ ಆಗಿತ್ತು . ನನ್ನ ತಾಯಿ ಶಾಂತಿ ಬಾಯಿ ಮತ್ತು ದೊಡ್ಡಮ್ಮ ಗೌರಿ ಬಾಯಿ ಸೇರಿ ನನ್ನ ತಂದೆಯನ್ನು ಸಂಡೂರ್ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ನಂತರ ಸಂಡೂರು ಪೊಲೀಸ್ ಠಾಣೆಗೆ ಹೋಗಿ ಆರೋಪಿಯ ವಿರುದ್ಧ ಪೊಲೀಸರಿಗೆ ಲಿಖಿತವಾಗಿ ದೂರನ್ನು ಕೊಟ್ಟಿದ್ದೆ . ನಾನು ಈಗ ನೋಡುತ್ತಿರುವ ದಾಖಲೆಯು ನಾನು ಪೊಲೀಸರಿಗೆ ನೀಡಿದ ದೂರು ಆಗಿರುತ್ತದೆ. ಅದರಲ್ಲಿ ನನ್ನ ಸಹಿಗಳು ಇವೆ . ಸಾಕ್ಷಿಯ ಸಹಿಗಳು 4 ಪುಟದಲ್ಲಿ ಇರುತ್ತದೆ. ದೂರನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ಕೊನೆಯ ಪುಟದಲ್ಲಿ ನಿಪಿ-1(ಎ)

ಎಂದು ಗುರುತಿಸಲಾಯಿತು. ಘಟನೆಯ ದಿವಸ ನನ್ನ ತಂದೆ ತೊಟ್ಟಿದ್ದ ಪಂಚೆ , ಟವಲ್ ಮತ್ತು ಬನಿಯನ್ ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿವಸ ನ್ಯಾಯಾಲಯದಲ್ಲಿ ಪೊಲೀಸರು ಜಪ್ತು ಮಾಡಿಕೊಂಡ ಪಂಚೆ ಮತ್ತು ಟವಲ್ ನ್ನು ನೋಡಿ ಗುರುತಿಸಿರುತ್ತಾರೆ. ಸದರಿ ರಕ್ತ ಹತ್ತಿದ ಪಂಚೆ ಮತ್ತು ಟವಲ್ ಗಳನ್ನು ಮು.ಮಾ-**1** ಮತ್ತು **2** ಎಂದು ಗುರುತಿಸಲಾಯಿತು.

ಸಂಡೂರು ಸರ್ಕಾರಿ ಆಸ್ಪತ್ರೆಯಲ್ಲಿ ನನ್ನ ತಂದೆಗೆ ಪ್ರಥಮ ಚಿಕಿತ್ಸೆ ನೀಡಿ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬಳ್ಳಾರಿಯ ಟ್ರಾಮಕೇರ್ ಸೆಂಟರ್ ಕರೆದುಕೊಂಡು ಹೋಗುವಂತೆ ತಿಳಿಸಿದ್ದರಿಂದ ನಾವು ಅದೇ ದಿವಸ ನನ್ನ ತಂದೆಯನ್ನು ಬಳ್ಳಾರಿ ಟ್ರಾಮಕೇರ್ ಸೆಂಟರ್ ಗೆ ಕರೆದುಕೊಂಡು ಹೋಗಿ ದಾಖಲು ಮಾಡಿದ್ದೆವು. ಬಳ್ಳಾರಿ ಟ್ರಾಮ ಕೇರ್ ಸೆಂಟರ್ ನಲ್ಲಿ ನನ್ನ ತಂದೆಯನ್ನು ಒಳರೋಗಿಯಾಗಿ ದಾಖಲಿಸಲು ತಿಳಿಸಿದ್ದರು. ಆದರೆ ನಾವು ನಮ್ಮ ತಂದೆಯ ಚಿಕಿತ್ಸೆ ಆದ ನಂತರ ನಮ್ಮ ತಂದೆಯನ್ನು ಮನೆಗೆ ಕರೆದುಕೊಂಡು ಬಂದೆವು.

ಘಟನೆಗೂ ಮೊದಲು ಆರೋಪಿ ಮತ್ತು ಆತನ ಹೆಂಡತಿಯ ನಡುವೆ ಪದೇ ಪದೇ ಜಗಳ ಆಗುತ್ತಿತ್ತು. ಆರೋಪಿಯು ನಮಗೆ ಸಂಬಂದಿಕನಾಗಿದ್ದರಿಂದ ನನ್ನ ತಂದೆ ಆರೋಪಿಗೆ ಮತ್ತು ಆತನ ಹೆಂಡತಿಗೆ ಬುದ್ದಿ ಮಾತು ಹೇಳಿ ಹೊಂದಾಣಿಕೆಯಿಂದ ಇರುವಂತೆ ಹೇಳುತ್ತಿದ್ದರು. ಆರೋಪಿಯು ತನ್ನ ಹೆಂಡತಿಯೊಂದಿಗೆ ಜಗಳವನ್ನು ಮುಂದುವರೆಸಿದ್ದರಿಂದ ಆರೋಪಿಯ ಹೆಂಡತಿಯೂ ಆರೋಪಿಯನ್ನು ಬಿಟ್ಟು ತನ್ನ ತವರು ಮನೆಗೆ ಹೋಗಿದ್ದಳು. ಅವಳು ಪುನಃ ಆರೋಪಿಯ ಮನೆಗೆ ವಾಪಾಸ್ಸು ಹೋಗಿರಲಿಲ್ಲ. ಆದ ಕಾರಣ ಆರೋಪಿಯು ನನ್ನ ತಂದೆಯ ಮೇಲೆ ಸಿಟ್ಟನ್ನು ಇಟ್ಟುಕೊಂಡಿದ್ದನು. ನನ್ನ ತಂದೆ ಆರೋಪಿ ಮತ್ತು ಆತನ ಹೆಂಡತಿಯನ್ನು ಒಂದು ಮಾಡಲಿಲ್ಲ ಎಂದು ಮತ್ತು ಆರೋಪಿಯ ಹೆಂಡತಿಯನ್ನು ಆರೋಪಿಯ ಮನೆಗೆ ಕರೆಸಿಲ್ಲ ಎಂದು ಸಿಟ್ಟನ್ನು ಇಟ್ಟುಕೊಂಡಿದ್ದನು. ಆರೋಪಿಯು ತನ್ನ ಮನೆಯಲ್ಲಿ ಯಾವುದೇ ಹೆಸರನ್ನು ಹೇಳದೆ ಕೆಟ್ಟ ಪದಗಳಿಂದ ಬೈದಾಡುತ್ತಿದ್ದನು. ನಂತರ ನಾನು ಮೇಲೆ ಹೇಳಿದ ಘಟನೆ ನಡೆದಿತ್ತು .

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ಬಿ ಕೆ ವಕೀಲರಿಂದ :

ನಾನು ಎಂ ಎಸ್ ಡಬ್ಲು ಮಾಸ್ಟರ್ ಡಿಗ್ರಿ ಮಾಡಿದ್ದೇನೆ. ಸಂಡೂರ್ ಬಸ್ ನಿಲ್ದಾಣದಿಂದ ನಮ್ಮ ಮನೆ ಸುಮಾರು 7 ಕಿ. ಮೀಟರ್ ದೂರ ಆಗಬಹುದು. ನಮ್ಮ ಮನೆಯಿಂದ ಸಂಡೂರು ಬಸ್ ನಿಲ್ದಾಣಕ್ಕೆ ಮೋಟಾರ್ ಸೈಕಲ್ ನಲ್ಲಿ ಹೋಗಲು ಸುಮಾರು 10 ರಿಂದ 15 ನಿಮಿಷ ಬೇಕಾಗುತ್ತದೆ. ನನ್ನ ಹೆಂಡತಿಯ ಫೋನ್ ನಂಬರ್ ನ್ನು ನಾನು ಪೊಲೀಸರಿಗೆ ಕೊಟ್ಟಿಲ್ಲ. ಕಾರಿನಲ್ಲಿ ಇದ್ದ ನನ್ನ ತಾಯಿ ಮತ್ತು ಅಣ್ಣನನ್ನು ನಾನು ಘಟನೆಯ ಬಗ್ಗೆ ವಿಚಾರಿಸಿರಲಿಲ್ಲ. ನನ್ನ ತಂದೆ ಆ ಸಮಯದಲ್ಲಿ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ನಾನು ಪೊಲೀಸ್ ಠಾಣೆಗೆ ದೂರು ನಂತರ ಸಂಡೂರು ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆ . ಪೊಲೀಸ್ ಠಾಣೆಗೆ ನಾನು ಮುಂಜಾನೆ ಸುಮಾರು 8-30 ಕ್ಕೆ ಹೋಗಿದ್ದೆ . ಸಂಡೂರು ಆಸ್ಪತ್ರೆಯಲ್ಲಿ ಮುಂಜಾನೆ 8-30 ರಿಂದ 9-30 ರ ತನಕ ನಾವು ಇದ್ದೆವು. ಸಂಡೂರು ಸರ್ಕಾರಿ ಆಸ್ಪತ್ರೆಗೆ ಪೊಲೀಸರು ಆ ಸಮಯದಲ್ಲಿ ಬಂದಿದ್ದರು. ಪೊಲೀಸರು ಘಟನೆಯ ಬಗ್ಗೆ ನನ್ನನ್ನು ಮತ್ತು ನನ್ನ ತಾಯಿಯನ್ನು ವಿಚಾರಣೆ ಮಾಡಿದ್ದರು.

ನನ್ನ ತಾಯಿ ಮತ್ತು ಆರೋಪಿಯ ತಾಯಿ ಅಕ್ಕ ತಂಗಿಯರು ಎಂದರೆ ಸರಿ . ನಾನು ಫೋನ್ ನಂಬರ್ 112 ಗೆ ಕರೆ ಮಾಡಿದ್ದ ಬಗ್ಗೆ ನನ್ನ ದೂರಿನಲ್ಲಿ ಹೇಳಿಲ್ಲ. ನಮ್ಮ ಹೊಸ ಮನೆಯಿಂದ ಆರೋಪಿಯ ಮನೆ ಸುಮಾರು 30 ಮೀಟರ್ ದೂರ ಇದೆ . ಹಳೇ ಮನೆ ಆರೋಪಿ ಮನೆಯಿಂದ 10 ಅಡಿ ದೂರದಲ್ಲಿ ಇದೆ . ನನ್ನ ತಂದೆ ವ್ಯವಸಾಯ ಮತ್ತು ಕಾರ್ಮಿಕ ಕೆಲಸ ಮಾಡುತ್ತಾರೆ. ಆರೋಪಿಯು ಯಾರ ಹೆಸರನ್ನು ಸಹ ನಮೂದಿಸದೇ ಬೈದಾಡುತ್ತಿದ್ದುದ್ದರಿಂದ ನಾವು ಆರೋಪಿಯ ವಿರುದ್ಧ ಯಾವುದೇ ದೂರನ್ನು ಕೊಟ್ಟಿರಲಿಲ್ಲ. ನನ್ನ ತಂದೆಗೆ ಬಿ . ಪಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಾವು ಅದನ್ನು ಚೆಕ್ ಮಾಡಿಸಿಲ್ಲ. ನನ್ನ ತಂದೆಗೆ ಬಿ. ಪಿ ಹೆಚ್ಚಿಗೆ ಇರುವ ಕಾರಣ ನನ್ನ ತಂದೆಯು ತಲೆ ಸುತ್ತಿ ಬಿದ್ದು ಪೆಟ್ಟು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆರೋಪಿಯ ಹೆಸರಿನಲ್ಲಿ ನಮ್ಮ ಮನೆಯ ಪಕ್ಕದಲ್ಲಿ ಒಂದು ಮನೆ ಇದೆ ಎಂದರೆ ನನಗೆ ಗೊತ್ತಿಲ್ಲ. ಜಗಳವಾದ ನಂತರ ನಾನು ಪೊಲೀಸರಿಗೆ ಘಟನೆ ನಡೆದ ಸ್ಥಳವನ್ನು ತೋರಿಸಿದ್ದೆ . ಘಟನೆ ನಡೆದ ದಿವಸವೇ ನಾನು

ಪೊಲೀಸರಿಗೆ ಘಟನೆ ಸ್ಥಳವನ್ನು ತೋರಿಸಿದ್ದೆ . ಆರೋಪಿಯನ್ನು ಊರು ಬಿಟ್ಟು ಕಳುಹಿಸಬೇಕು ಎಂದು ಮತ್ತು ಆರೋಪಿಯ ಮನೆಯನ್ನು ನಾವು ತೆಗೆದುಕೊಳ್ಳಬೇಕು ಎಂಬ ಉದ್ದೇಶದಿಂದ ಆರೋಪಿಯ ವಿರುದ್ಧ ನಾನು ಸುಳ್ಳು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಮು.ಮಾ-1 ಮತ್ತು 2 ನನ್ನ ತಂದೆಯದು ಅಲ್ಲ ಎಂದರೆ ಸರಿಯಲ್ಲ. ಅದನ್ನು ನಾವೇ ಪೊಲೀಸರಿಗೆ ಪ್ರಕರಣಕ್ಕೆ ಅನುಕೂಲವಾಗುವಂತೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆರೋಪಿಯು ನನ್ನ ತಂದೆಗೆ ಮಚ್ಚಿನಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಘಟನೆಯಾದ ನಂತರ ಆರೋಪಿಯು ತನ್ನ ಮನೆಯಲ್ಲಿ ವಾಸ ಇಲ್ಲ ಎಂದರೆ ಸಾಕ್ಷಿಯು ಆರೋಪಿಯು ಘಟನೆಯ ನಂತರ ಕಾಣಿಸುತ್ತಿಲ್ಲ ಎಂದು ಹೇಳಿರುತ್ತಾನೆ. ಆರೋಪಿಯು ಯಾವುದೇ ತಪ್ಪು ಮಾಡದೆ ಇದ್ದರೂ ಸಹ ಆತನನ್ನು ಮನೆಯಿಂದ ಓಡಿಸಬೇಕು ಎಂಬ ಕಾರಣದಿಂದ ಆತನ ವಿರುದ್ಧ ಸುಳ್ಳು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.